ಓ.ಎಸ್. ನಂ. 213 /2014
DW-2

**ಸಾಕ್ಷಿಯನ್ನು ದಿನಾಂಕ: 07-03-2026 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀಸವಾಲುಃ ವಾದಿ ಪರ ಶ್ರೀ DGT ವಕೀಲರಿಂದ**

1. ನಮ್ಮ ಗ್ರಾಮದಲ್ಲಿ ನನಗೆ 4 ಕಡೆ ಜಮೀನು ಇರುತ್ತದೆ. ದಾವಾ ಆಸ್ತಿಯ ಪಕ್ಕದಲ್ಲಿ ನನಗೆ ಸೇರಿದ ಸ.ನಂಬರ್ 53 ಬರುತ್ತದೆ. ಸದರಿ ಜಮೀನು ನನಗೆ ಪಿತ್ರಾರ್ಜಿತವಾಗಿ ಬಂದಿರುತ್ತದೆ. ಸದರಿಸ.ನಂಬರ್ 53 ಪೂರ್ವಕ್ಕೆ ಗುಜ್ಜಾರಪ್ಪರವರ ಜಮೀನು, ಪಶ್ಚಿಮಕ್ಕೆ ರಾಜಣ್ಣ ಮತ್ತು ಕಾಮಣ್ಣರವರ ಜಮೀನು, ಉತ್ತರಕ್ಕೆ ಬಸವರಾಜುರವರಿಗೆ ಸೇರಿದ ಜಮೀನು, ದಕ್ಷಿಣಕ್ಕೆ ಗುಜ್ಜಾರಪ್ಪರವರಿಗೆ ಸೇರಿದ ಜಮೀನು ಬರುತ್ತದೆ. ಸದರಿ ಚಕ್ಕುಬಂದಿ ಒಳಗಿನ ಜಮೀನಿನ ಸ.ನಂಬರ್ ಗಳನ್ನು ನನ್ನಿಂದ ಹೇಳಲಾಗುವುದಿಲ್ಲ. ದಾವಾ ಆಸ್ತಿಯನ್ನು ನಾನು ಬುದ್ಧಿ ಬಂದಾಗಿನಿಂದಲೂ ನೋಡುತ್ತಿದ್ದೇನೆ. ದಾವಾ ಆಸ್ತಿಯ ಉತ್ತರಕ್ಕೆ ಬಸವರಾಜುರವರಿಗೆ ಸೇರಿದ ಜಮೀನು ಬರುತ್ತದೆ. ಸದರಿ ಜಮೀನಿನ ಪೈಕಿ ಸ್ವಲ್ಪ ಜಮೀನನ್ನು ಬಸವರಾಜುರವರು ಕ್ರಯಕ್ಕೆ ಪಡೆದಿರುತ್ತಾರೆ. ಬಸವರಾಜುರವರು ಯಾವಾಗ ಕ್ರಯಕ್ಕೆ ಪಡೆದಿರುತ್ತಾರೆಂದು ನನಗೆ ಗೊತ್ತಿಲ್ಲ. ನಾನು ದಾವಾಆಸ್ತಿಗೆ ಸಂಬಂಧಿಸಿದ ರೆವಿನ್ಯೂ ದಾಖಲಾತಿಗಳನ್ನು ನೋಡಿರುವುದಿಲ್ಲ. ದಾವಾ ಆಸ್ತಿಯಲ್ಲಿ ಈಗ ಗಂಗಯ್ಯ ಮತ್ತು ಸಿದ್ದಯ್ಯರವರು ಸ್ವಾಧೀನದಲ್ಲಿರುತ್ತಾರೆ. ಆ ಬಗ್ಗೆ ನಾನು ದಾಖಲಾತಿಗಳನ್ನು ನೋಡಿರುವುದಿಲ್ಲ. ಬೆಳೆ ಇಟ್ಟಿರುವುದನ್ನು ನೋಡಿರುತ್ತೇನೆ. ಗಂಗಯ್ಯ ಮತ್ತು ಸಿದ್ದಯ್ಯರವರು 2 ಎಕರೆ ಜಮೀನಿನಲ್ಲಿ ಬೆಳೆಯನ್ನು ಇಟ್ಟಿರುತ್ತಾರೆ.

2. ದಾವಾ ಆಸ್ತಿಯಲ್ಲಿ ಒಂದು ಸಮಾಧಿ ಇರುತ್ತದೆ. ಸದರಿ ಸಮಾಧಿ ಗಂಗಣ್ಣ ಮತ್ತು ಸಿದ್ದಯ್ಯರವರ ಸಮಾಧಿ ಆಗಿರುತ್ತದೆ. ನನ್ನ ಕನ್ನಡ ಮತ್ತು ಆಂಗ್ಲ ಭಾಷೆ ಓದಲು ಮತ್ತು ಬರೆಯಲು ಬರುವುದಿಲ್ಲ. ದಾವಾ ಆಸ್ತಿಯಲ್ಲಿ ವಾದಿಗಳು ಸ್ವಾಧೀನದಲ್ಲಿರುತ್ತಾರೆಂದರೆ ಸರಿಯಲ್ಲ. ಸಿದ್ದಪ್ಪನ ತಂದೆ ಗಂಗಪ್ಪರವರನ್ನು ನಾನು ನೋಡಿರುವುದಿಲ್ಲ. ಸಿದ್ದಪ್ಪನಿಗೆ ಎಷ್ಟು ಜನ ಸಹೋದರರು ಎಂದು ನನಗೆ ಗೊತ್ತಿಲ್ಲ. ಸದರಿ ಸಿದ್ದಪ್ಪ ಮತ್ತು ಅವರ ಸಹೋದರರು ವಿಭಾಗ ಮಾಡಿಕೊಂಡಿರುತ್ತಾರೋ ಇಲ್ಲವೊ ನನಗೆ ಗೊತ್ತಿಲ್ಲ. ಸಿದ್ದಪ್ಪರವರಿಗೆ ಸೇರಿದ ಎಷ್ಟು ಆಸ್ತಿಗಳಿವೆ ಎಂದು ನನಗೆ ಗೊತ್ತಿಲ್ಲ. ಸಿದ್ದಪ್ಪ ಮತ್ತು ಅವರ ಸಹೋದರರಿಗೆ ಸೇರಿದ ಎಷ್ಟು ಆಸ್ತಿಗಳು ಇವೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ನನಗೆ ದಾವಾ ಆಸ್ತಿಯ ಬಗ್ಗೆ ಏನೂ ಗೊತ್ತಿಲ್ಲದೇ ಇದ್ದರೂ ಪ್ರತಿವಾದಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ದಾವಾ ಆಸ್ತಿಯು ಗಂಗಪ್ಪ ಮತ್ತು ಸಿದ್ದಪ್ಪರವರಿಗೆ ಯಾವ ರೀತಿ ಬಂದಿದೆ ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಯಲ್ಲಿ 5 ಜನ ಸ್ವಾಧೀನದಲ್ಲಿದ್ದರೂ ನಾನು ಗಂಗಪ್ಪ

ಮತ್ತು ಸಿದ್ದಯ್ಯ ಸ್ವಾಧೀನದಲ್ಲಿರುತ್ತಾರೆಂದು ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಸಿದ್ದಪ್ಪನ ಸಹೋದರರು ವಿಭಾಗ ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

**ಓ. ಹೇ.ಕೇ.ಸರಿ ಇದೆ.**

**ಸಿ.ಜೆ ಮತ್ತು ಜೆಎಂ.ಎಫ್ ಸಿ**
**ಕೊರಟಗೆರೆ**